

# ಕೃಷಿಗೂ ಇಂಬಿದೆ

## ಸುನಿಲ್ ಪುರಾಣಿಕ್

ಉದಯದ 'ಮಾಹಾಸತಿ'ಯ ನಿರ್ದೇಶಕ, ನಿರ್ಮಾಪಕ

★ *ನಟನೆ, ನಿರ್ದೇಶನ ಮತ್ತು ನಿರ್ಮಾಣ ಈ ತ್ರಿಕೋನ ಪಾತ್ರವನ್ನು ಹೇಗೆ ನಿರ್ವಹಿಸುತ್ತೀರಿ?*

ಇದು ಹೊಸತೇನೂ ಅಲ್ಲ. 'ಸಂಗೊಳ್ಳಿ ರಾಯಣ್ಣ' 'ಶಿವಲೀಲಾಮೃತ'ದಲ್ಲಿ ಇದೆ ರೀತಿ ತೊಡಗಿಸಿಕೊಂಡಿದ್ದೆ. ಹಾಗಾಗಿ ವಿಶೇಷ ಅಂತ ಅನ್ನಿಸಿಲ್ಲ. ಆದರೆ ಅದಕ್ಕೆಲ್ಲಾ ಬೆನ್ನೆಲುಬಾಗಿ ಸಹಾಯ ನೀಡುತ್ತಿರುವುದು ನಮ್ಮ ತಂಡ. ಒಳ್ಳೆಯ ತಂಡ ಇರುವುದರಿಂದ ಅದೆಲ್ಲಾ ಸಾಧ್ಯವಾಗುತ್ತಿದೆ.

★ *ಬೈಲಹೊಂಗಲದತ್ತ ಹೋಗಿರುವ ವಿಶೇಷ ಏನು?*

ಪ್ರಾದೇಶಿಕ ಪ್ರಾಮುಖ್ಯತೆ ಒಂದು ನೆಪ ಅಷ್ಟೆ. ಆಮೂಲಕ ಸಾಮಾಜಿಕ ಜವಾಬ್ದಾರಿಗಳ ನಿರ್ವಹಣೆ ಹೊಣೆ ಎಂದು ಭಾವಿಸಿದ್ದೇವೆ. ಬರಗಾಲದಿಂದ ಬೆಂದಿರುವ ಪ್ರದೇಶದಲ್ಲಿ ನಮ್ಮ ಪ್ರಯತ್ನ ಕೆಲವರಿಗಾದರೂ ಸಣ್ಣ ಪ್ರಮಾಣದ ಸಹಾಯ ಮಾಡುತ್ತಿದೆ. ನಮ್ಮ ಸಹಾಯಕ್ಕೆ ಸ್ಥಳೀಯ ಮಾನವ ಸಂಪನ್ಮೂಲವನ್ನೇ ಬಳಸಿದ್ದೇವೆ. ಇದರ ಜೊತೆಗೆ ನಾವು ಕಳಸಾ ಬಂಡೂರಿ ಸಮಸ್ಯೆಯನ್ನು ಪ್ರತಿಬಿಂಬಿಸಿದ್ದೇವೆ. ನರಗುಂದದಲ್ಲಿಯೂ ಚಿತ್ರೀಕರಣ ಮಾಡುವ ಮೂಲಕ ಆ ಸಮಸ್ಯೆಯ ಮೂಲ ಸ್ಪರ್ಶಕ್ಕೆ ಕಾರಣರಾಗಿದ್ದೇವೆ. ಮೇಲಾಗಿ ಕೃಷಿ ಸಂಬಂಧಿತ ಧಾರಾವಾಹಿಗಳು ತುಂಬಾ ವಿರಳ ಎನ್ನುವ ಆರೋಪವಿದೆ. ಅಂತಹ ವಿರಳ ಸಂಗತಿಯನ್ನು ಇಲ್ಲಿ ತೆಗೆದುಕೊಂಡಿದ್ದೇವೆ. ಅದರಲ್ಲೂ ಸಾವಯವ ಕೃಷಿಯನ್ನು ಪ್ರಧಾನವಾಗಿ ತೋರಿಸಿದ್ದೇವೆ. ಮತ್ತೊಂದು ಕಾರಣ ಎಂದರೆ ಪ್ರಾದೇಶಿಕ ಭಾಷಾ ಸೊಗಡಿನ ತಾಜಾತನ ಕಾಪಾಡುವುದು. ಈ ಹಿಂದೆ 'ಮೂಡಲಮನೆ'ಯಲ್ಲಿ ಈ ಪ್ರಯತ್ನ ಮಾಡಿದ್ದೆವು. ಆದರೆ ಅದು ಒಂದು ವರ್ಗದ ಭಾಷೆ ಮಾತ್ರವಾಗಿತ್ತು. ಅದನ್ನು ಬೆಂಗಳೂರಿನ ಸುತ್ತ ಚಿತ್ರೀಕರಿಸಿದ್ದೆವು. ಇಲ್ಲಿ ಸಮಾಜದ ಎಲ್ಲಾ ವರ್ಗದ ಜನರ ಭಾಷೆಯನ್ನು ದುಡಿಸಿಕೊಳ್ಳುವ ಮೂಲಕ ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನ ನಮ್ಮ ಉದ್ದೇಶ.

★ *'ಮಹಾಸತಿ' ಕಥೆ ಏನನ್ನ ತೋರಿಸಲು ಹೊರಟಿದೆ?*

ಜಾತಿ ಧರ್ಮಗಳನ್ನು ಮೀರಿ ಮಾನವಿಯ ನೆಲೆಯಲ್ಲಿ ಬದುಕನ್ನು ಅನಾವರಣ ಮಾಡುವುದು. ಇಲ್ಲಿ ಜಯತೀರ್ಥ ಜಹಗೀರದಾರ ಎಂದು ಒಬ್ಬ ಬ್ರಾಹ್ಮಣ ವ್ಯಕ್ತಿ. ಶಿವಾನಂದ ಹಿರೇಮಠ (ನಾನು ನಿರ್ವಹಿಸುವ ಪಾತ್ರ)ಎಂಬ ವೀರಶೈವ ವ್ಯಕ್ತಿ ಆಪ್ತಮಿತ್ರರಿರುತ್ತಾರೆ. ಅವರು ತಮ್ಮ ಮತಾಚರಣೆಯ ಮೀರಿ ಸ್ನೇಹಕ್ಕೆ ಆದರ್ಶವಾಗಿರುತ್ತಾರೆ. ಇವರ ಮಕ್ಕಳಿಬ್ಬರ ನಡುವೆ ಸಂಭವಿಸುವ ಪ್ರೇಮ ಪ್ರಕರಣದ ಮೂಲಕ ಸಾಮಾಜಿಕ ಕಂದಾಚಾರ, ವ್ಯಕ್ತಿಯ ಲಾಭಕೋರತನ ಮೌಢ್ಯವನ್ನು ಬಯಲು ಮಾಡುತ್ತಿದ್ದೇವೆ.

ಜೀವದ ಗೆಳೆಯರ ಮಕ್ಕಳು ಮದುವೆಯಾಗುವ ಸಂದರ್ಭವೂ ವಿಶಿಷ್ಟವಾದದ್ದು. ಇಬ್ಬರಲ್ಲೂ ಸ್ನೇಹ ಇರುತ್ತದೆ. ಕಥಾನಾಯಕಿ ವಿಧವೆಯಾಗಿರುತ್ತಾಳೆ. ಆಕೆಗೆ ಸಾಮಾಜಿಕ ಮನ್ನಣೆ ಎನ್ನುವುದು ಇರುವುದಿಲ್ಲ. ಎಲ್ಲೆಡೆ ಅವಮಾನ, ಅನಿಷ್ಟದ ನಿಂದನೆಗಳು ಇರುತ್ತವೆ. ಹೀಗಾಗಿ ತನ್ನ ಗೆಳೆಯನ ಮದುವೆಗೆ ಬರಲು ನಿರಾಕರಿಸುತ್ತಾಳೆ. ನೀನು ಬಾರದೆ ನಾನು ತಾಳಿ ಕಟ್ಟುವುದಿಲ್ಲ ಎನ್ನುವ ಸವಾಲನ್ನು ಆತ ಹಾಕುತ್ತಾನೆ. ದೂರದಲ್ಲಿ ಎಲ್ಲೋ ಒಂದು ಆಕೆ ನಿಂತಿರುತ್ತಾಳೆ. ಹಸೆ ಏರಬೇಕಾದ ಹೆಣ್ಣು ಅಲ್ಲಿರುವುದಿಲ್ಲ. ಆಗ ವಿಧವೆಗೆ ಮಂಗಳಸೂತ್ರವನ್ನು ಧಾರಣೆ ಮಾಡುತ್ತಾನೆ. ಈ ಸಂದರ್ಭದಲ್ಲಿ ನಡೆಯುವ ವಾದ– ವಿವಾದ, ಶಾಸ್ತ್ರ– ಸಂಪ್ರದಾಯಗಳ ಸಂಘರ್ಷಗಳ ಮೂಲಕ ಪುರುಷನ ಲಾಭಕೋರತನವನ್ನು ಬಯಲು ಮಾಡಿ ಮಾನವೀಯ ಮೌಲ್ಯಗಳನ್ನು ಬಿಂಬಿಸುತ್ತಿದ್ದೇವೆ.

★ *ನಿಮಗೆ ಬಣ್ಣದ ಬದುಕಿನತ್ತ ಒಲವು ಮೂಡಿದ್ದು ಹೇಗೆ?*

ನಮ್ಮೂರು ಧಾರಾವಾಡ. ನನ್ನ ತಂದೆ ನರಸಿಂಹ ಆಚಾರ್ ಪುರಾಣಿಕ್. ತುಂಬಾ ಸಾತ್ವಿಕ ಸ್ವಭಾವದವರು. ಅವರು ದಾನ– ಧರ್ಮದ ಮೂಲಕ ಬದುಕಿನ ಸಾರ್ಥಕತೆಯನ್ನು ನಮಗೆ ಕಲಿಸಿದವರು. ಅವರಿಗೆ 9 ಜನ ಮಕ್ಕಳು. ನಾನೇ ಎಲ್ಲರಿಗಿಂತ ಚಿಕ್ಕವನು. ಬಾಲ್ಯದಲ್ಲಿ ನನಗೆ ಭರತನಾಟ್ಯ ಕಲಿಯುವ ಆಸೆ ಉಂಟಾಯಿತು. ಆದರೆ ಅವರು ಮೊದಲು ಓದು ಪೂರೈಸಲು ಹೇಳಿದರು. ಅಷ್ಟರಲ್ಲಿ ನನಗೆ ಆ ಆಸಕ್ತಿಯೇ ಹೋಯಿತು. ಡಿಪ್ಲೊಮಾ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮಾಡಿದೆ. ಅದಾದ ಮೇಲೆ ಉದ್ಯೋಗ ಅಂತ ಬೇರೆ ಏನು ಮಾಡುವುದು. ಏನಾದರೂ ಸ್ವಂತ ಮಾಡಬೇಕು ಎಂದು ಬೆಂಗಳೂರಿಗೆ ಬಂದೆ. ನನ್ನ ಅಣ್ಣಂದಿರೆಲ್ಲರೂ ಬೇರೆ ಬೇರೆ ನೌಕರಿಯಲ್ಲಿದ್ದರು. ಅವರು ಬೆಂಬಲಿಸಿದರು. ಆದರ್ಶ ಫಿಲ್ಮ್ ತರಬೇತಿ ಸಂಸ್ಥೆಯಲ್ಲಿ ನಟನೆಯನ್ನು ಕಲಿತೆ. ಹಲವಾರು ನಿರ್ದೇಶಕರ ಜೊತೆ ಕೆಲಸ ಕಲಿತೆ. ದೂರದರ್ಶನದಲ್ಲಿ 'ಸ್ವರಸಂಪದ'ವನ್ನು ನಿರ್ದೇಶನ ಮಾಡಿದೆ. ಸ್ವತಂತ್ರನಾದೆ.

★ *ನಿಮ್ಮ ಸ್ಮರಣೀಯ ಧಾರಾವಾಹಿಗಳು ಯಾವುವು?*

ನನಗೆ ರಾಷ್ಟ್ರೀಯ ಚಳವಳಿ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಎಂದರೆ ತುಂಬಾ ಪ್ರೀತಿ. ಈ ಕಾರಣಕ್ಕೆ ಸಂಗೊಳ್ಳಿ ರಾಯಣ್ಣ, ಚೆನ್ನಮ್ಮ ಸೇರಿದಂತೆ ಅಂತಹ ಹಲವು ನಾಯಕರ ಕಥೆಗಳಿಗೆ ದೃಶ್ಯರೂಪ ನೀಡಿದ್ದೇನೆ. ಸಿ.ಎನ್.ಮುಕ್ತ ಅವರ 'ಜೀವನ ಚಕ್ರ' ವ್ಯಾಸರಾಯ ಬಲ್ಲಾಳರ 'ಬಂಡಾಯ' ಟಿ.ಪಿ.ಕೈಲಾಸಂ, ಬರಗೂರು ರಾಮಚಂದ್ರಪ್ಪ, ಶಾಂತಿನಾಥ ದೇಸಾಯಿ ಅವರ ಕಥೆಯಾದಾರಿತ ಧಾರಾವಾಹಿಗಳು, ಡಿವಿಜಿ ಅಂತಃಪುರದ ಗೀತೆಗಳು ಅತ್ಯಂತ ಖುಷಿ ಕೊಟ್ಟಿವೆ.

■ ರಾಗು